VII ಬಡವರು ಕೆಲವೊಂದು ಸೌಲಭ್ಯ ಪಡೆಯಲು ಈಗಿರುವ ೩,೬೦೦–೦೦ ರೂ. ಗಳ ವಾರ್ಷಿಕ ವರಮಾನವನ್ನು ೭,೨೦೦–೦೦ ರೂ. ಗಳಿಗೆ ಏರಿಸುವುದರ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ವಿದ್ಯಾರ್ಥಿಗಳು ಶಾಲ ಸೇರ್ಪಡೆಯಾಗಲು ಇನ್ನಿತರ ಸೌಲಭ್ಯ ಪಡೆಯಲು, ಬಡಪರಿಗೆ ಹೆಸರು ಕಾರ್ಡ್ ಪಡೆಯಲು ಸರಕಾರದ ಬೇರೆ ಬೇರೆ ಅನೇಕ ಸವಲತ್ತುಗಳನ್ನು ಪಡೆಯಲು ಆದಾಯ ಸರ್ಟಿಫಿಕೇಟು ಅತ್ಯಗತ್ಯ. ಅದನ್ನು ಗ್ರಾಮಲೆಕ್ಕಿಗರು, ತಹಶೀಲ್ದಾರರು ಕೊಡಬೇಕು. ಬಹಳ ಹಳೆಕಾಲದ ೩,೬೦೦–೦೦ ರೂಪಾಯಿಗಳ ವಾರ್ಷಿಕ ವರಮಾನವನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು ಈ ಕಾಲಕ್ಕೆ ತಾಳೆ ಬೀಳುವುದಿಲ್ಲ. ಈಗ ಎಲ್ಲದಕ್ಕೂ ಒಂದರ ಬದಲು ಇಪ್ಪತ್ತು ಪಟ್ಟು ಜಾಸ್ತಿಯಾಗಿರುವಾಗ ಈ ೩,೬೦೦–೦೦ ರೂಪಾಯಿಗಳು ಸಮಂಜಸವಾಗುವುದಿಲ್ಲ. ಆದಾಯ ಸರ್ಟಿಫಿಕೇಟು ಪಡೆಯುವವರಿಗೂ, ಕೊಡುವವರಿಗೂ ತುಂಬಾ ಕಷ್ಟ ಮತ್ತು ತೊಂದರೆ ಒದಗುತ್ತಿದೆ. ಆದಕಾರಣ, ಈ ಕಾಲದ ಆರ್ಥಿಕ ಮಟ್ಟಕ್ಕನುಸರಿಸಿ ೩,೬೦೦–೦೦ ರೂಪಾಯಿಗಳ ನಿಗದಿಯನ್ನು ೭,೨೦೦–೦೦ ರೂಪಾಯಿಗಳಿಗೆ ಏರಿಸುವುದು ಅತ್ಯಗತ್ಯವಾಗಿರುತ್ತದೆ. ಈ ಕಠಿತು ಕಂದಾಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು ಮಾನ್ಯ ಕಂದಾಯ ಮಂತ್ರಿಗಳವರ ಪರವಾಗಿ),—ಮಾನ್ಯ ಸದಸ್ಯರು ಸರ್ಕಾರದ ಗಮನಸೆಳೆದಿರುವ ವಿಷಯವನ್ನು ಕಂದಾಯ ಸಚಿವರ ಗಮನಕ್ಕೆ ತರುತ್ತೇನೆ.

VIII ಬೈಲ ಹೊಂಗಲ ತಾಲ್ಲೂಕಿನಲ್ಲಿ ಶ್ರೀ ಸೋಮಪ್ಪ ಬಸಪ್ಪ ಸೋಮಣ್ಣನವರ್‌ರಿಗೆ ಪೋಲೀಸರು ಚಿತ್ರಹಿಂಸೆ ನೀಡಿರುವ ಬಗ್ಗೆ.

ಶ್ರೀ ಎಮ್. ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಬೈಲಹೊಂಗಲ ತಾಲ್ಲೂಕಿನ ಶ್ರೀ ಸೋಮಪ್ಪ ಬಸಪ್ಪ ಸೋಮಣ್ಣವರ್ ಈತನು ತನ್ನ ಉಪ ಜೀವನಕ್ಕಾಗಿ ಬೆಳಗಾವಿಯ ಸಂಗಮೇಶ್ವರ ಖಾನಾವಳಿಯಲ್ಲಿ ನೌಕರಿ ಮೇಲೆ ಇದ್ದಾಗ ಕಾಗತಿ ಮೇಸ್ ಕಕ್ಷೆಯಲ್ಲಿ ಬರುವ ಈತನನ್ನು ಮಾರಿಹಾಳ ಪೋಲೀಸ್ ಠಾಣೆಯ ಪೋಲೀಸರು ಬಂದು ಠಾಣೆಗೆ ಕರೆದೊಯ್ದಿರುತ್ತಾರೆ. ತಾರೀಖು ೨–೩–೫೬ ರಂದು ರಾತ್ರಿ ೧–೩೦ ಗಂಟೆಗೆ ಈತನನ್ನು ಪೋಲೀಸರು ಕರೆದೊಯ್ದ ಮೇಲೆ ಇಲ್ಲಿಯವರೆಗೆ ಆತನ ಬಗ್ಗೆ ಯಾವುದೇ ಮಾಹಿತಿ ದೊರಕಿಲ್ಲ.

ಇದೇ ವಿಷಯದಲ್ಲಿ ಮಾರಿಹಾಳ ಪೋಲೀಸ್ ಸ್ಟೇಷನ್‌ನವರು ಇನ್ನೂ ನಾಲ್ಕು ಜನರನ್ನು ಕರೆದೊಯ್ದಿದ್ದು ತಿಳಿದು ಬಂದಿರುತ್ತದೆ. ಶ್ರೀ ಸೋಮಪ್ಪ ಬಸಪ್ಪ ಸೋಮಣ್ಣವರ್ ಈತನನ್ನು ಪೋಲೀಸ್ ಠಾಣೆ ಕರೆದೊಯ್ದ ಮೇಲೆ ಅವನನ್ನು ಚಿತ್ರಹಿಂಸೆಗೆ ಒಳಪಡಿಸಲಾಗಿದ್ದು, ಸಾಕಷ್ಟು ಶಾರೀರಿಕ ಹಿಂಸೆ ಕೊಡಲಾಗಿದೆ ಎಂದು ತಿಳಿದು ಬಂದಿರುತ್ತದೆ ತದನಂತರ ಸಾರ್ವಜನಿಕರಲ್ಲಿ ಈತನನ್ನು ಪೋಲೀಸರಿಂದ ಕೊಲೆ ಮಾಡಲಾಗಿದೆಯೆಂಬ ವಿಷಯ ಚರ್ಚೆಯಾಗಿದ್ದು, ಈ ವಿಷಯದಲ್ಲಿ ತಪ್ಪಿತಸ್ಥ ಪೋಲೀಸ್ ಇಲಾಖಾ ಅಧಿಕಾರಿಗಳ ಬಗ್ಗೆ ವಿಶೇಷ ತನಿಖೆ ನಡೆದು ಶ್ರೀ ಸೋಮಪ್ಪ ಬಸಪ್ಪ ಸೋಮಣ್ಣವರ್ ಈತನ ಬಗ್ಗೆ ವಿವರವಾದಂತಹ ಹೇಳಿಕೆಯನ್ನು ಸದನದಲ್ಲಿ ನೀಡುವಂತೆ ಗಮನವನ್ನು ಸೆಳೆಯುತ್ತೇನೆ. ಗೃಹ ಮಂತ್ರಿಗಳಿಂದ ಹೇಳಿಕೆಯನ್ನು ಬಯಸಲಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು ಗೃಹ ಮಂತ್ರಿಗಳ ಪರವಾಗಿ).—ಮಾನ್ಯ ಗೃಹಮಂತ್ರಿಗಳವರ ಗಮನಕ್ಕೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ವಿಷಯವನ್ನು ತಂದು, ಸಮಂಜಸವಾದ ಉತ್ತರವನ್ನು ಕಳುಹಿಸಿಕೊಡಲು ವಿನಂತಿಸುತ್ತೇನೆ.

IX ಬೆಳ್ತಂಗಡಿ ಪುರಸಭೆಯ ಸರಹದ್ದಿನಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ.

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಲೆನಾಡು ಹಾಗೂ ಹಿಂದುಳಿದ ಪ್ರದೇಶವಾದ ಬೆಳ್ತಂಗಡಿ ತಾಲ್ಲೂಕಿನಲ್ಲಿ ಒಂದೇ ಒಂದು ಪುರಸಭೆ, ಅದು ಬೆಳ್ತಂಗಡಿ ಪುರಸಭೆ. ಸುಮಾರು ಒಂದು

ವರ್ಷದ ಹಿಂದೆ ಪುರಸಭೆಯ ವ್ಯಾಪ್ತಿಯೊಳಗೆ ಶುದ್ಧವಾದ ಕುಡಿಯುವ ನೀರಿನ ಯೋಜನೆಗೆ ರೂಪಾಯಿ ೨೨½ ಲಕ್ಷ ಮಂಜೂರಾಗಿದ್ದು ಇಷ್ಟರ ತನಕ ಯಾವುದೇ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ. ಈಗಲೂ ಪುರಸಭೆಯ ವ್ಯಾಪ್ತಿಯಲ್ಲಿ ವಾಸಿಸುವ ಜನರು ಹೊಳೆಯಿಂದ ನೇರವಾಗಿ ಪಂಪುಮಾಡಿ ಸಪ್ಲೈ ಮಾಡುತ್ತಿರುವ, ಮಲ-ವಿಸರ್ಜಿತ, ಕೊಳಕು ಮಣ್ಣಿನ ಮಿಶ್ರಿತ, ಹಾಗೂ ದುರ್ವಾಸನೆಯಿಂದ ಕೂಡಿದ ಮತ್ತು ಆಗಾಗ ಬೇರೆ ಬೇರೆ ಬಣ್ಣಗಳಿಂದ ಗೋಚರಿಸುವ ಅಶುದ್ಧವಾದ ನೀರನ್ನು ಕುಡಿಯುತ್ತಿದ್ದಾರೆ.

ಈ ಅಶುದ್ಧವಾದ ನೀರನ್ನು ಎಷ್ಟು ಸಮಯ ಕುಡಿಯಬೇಕು ? ಮಂಜೂರಾದ ಕಾಮಗಾರಿ ಪ್ರಾರಂಭಿಸಿಲ್ಲವೇಕೆ ? ಯಾವಾಗ ಪ್ರಾರಂಭಿಸುತ್ತೀರಿ ? ಪುರಸಭೆ ಮಂಡಲ್ ಪಂಚಾಯತ್ ಆದುದರಿಂದ ಈ ಕಾಮಗಾರಿಯನ್ನು ಪ್ರಾರಂಭಿಸಿಲ್ಲವೆ ? ದಯವಿಟ್ಟು ತಕ್ಷಣ ಈ ಕಾಮಗಾರಿಯನ್ನು ಪ್ರಾರಂಭಿಸಿ, ಆದಷ್ಟು ಬೇಗ ಶುದ್ಧವಾದ ನೀರನ್ನು ಕುಡಿಯುವ ಅವಕಾಶವನ್ನು ಜನರಿಗೆ ಕಲ್ಪಿಸಿಕೊಟ್ಟು ಬರಬೇಕಾದ ರೋಗ ರುಜಿನಿಂದ ಬೆಳ್ತಂಗಡಿ ಪುರಸಭೆಯಲ್ಲಿರುವ ಜನರನ್ನು ರಕ್ಷಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಪಿ. ಜೆ ಆರ್. ಸಿಂಧ್ಯ (ಮಾನ್ಯ ಸಾರಿಗೆ ಮಂತ್ರಿಯವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಮೇಲಿಕೆಯನ್ನು ತಮ್ಮ ಅಪ್ಪಣೆಯನ್ನು ಕೋರಿ ಸಭೆಯ ಮುಂದೆ ಇಡುತ್ತೇನೆ.

ಬೆಳ್ತಂಗಡಿ ಪಟ್ಟಣದ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೫೬೬೮ ಇರುತ್ತದೆ.

ಪ್ರಸ್ತುತ ಬೆಳ್ತಂಗಡಿ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ೧೯೭೩ ರಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ಪೂರ್ಣಗೊಳಿಸಲಾಯಿತು. ಈ ಯೋಜನೆಗನ್ ಗುಣವಾಗಿ ಪಟ್ಟಣದ ಕೆಲವೊಂದು ಪ್ರದೇಶಗಳಿಗೆ ಬೆಳ್ತಂಗಡಿ ನದಿಯ ನೀರನ್ನು ಕೊಳವೆಗಳ ಮೂಲಕ ಜಾಕ್‌ವೆಲ್‌ನ್ನು ಪಡೆದು ಅದನ್ನು ಶುದ್ಧಿಕರಿಸಿದೆ. ಅಲ್ಲಿಂದ ೧೦೦ ಮಿ. ಮಿ. ವ್ಯಾಸದ ಎರಕದ ಕೊಳವೆಯ ಮೂಲಕ ೧.೨೨ ಲಕ್ಷ ಲೀಟರ್ ಸಾಮರ್ಥ್ಯದ ಭೂಮಟ್ಟದ ಜಲಸಂಗ್ರಹಾರಕ್ಕೆ ಪಂಪು ಮಾಡಲಾಗುತ್ತಿದೆ ಈ ಜಲಸಂಗ್ರಾಹಾಗಾರದಿಂದ ವಿತರಣಾ ವ್ಯವಸ್ಥೆಯ ಮೂಲಕ ಪುರ ಜನರಿಗೆ ನೀರನ್ನು ಪೂರೈಸಲಾಗುತ್ತಿದೆ ಈ ಯೋಜನೆಯನ್ನು ೨.೬೨ ಲಕ್ಷ ರೂ. ಗಳ ವೆಚ್ಚದಲ್ಲಿ ಪೂರ್ಣಗೊಳಿಸಿದ್ದು ಇದರ ನಿರ್ವಹಣೆಯನ್ನು ಬೆಳ್ತಂಗಡಿ ಪುರಸಭೆ ನೋಡಿಕೊಳ್ಳುತ್ತಿದೆ. ಈ ಯೋಜನೆಯಲ್ಲಿ ನೀರಿನ ಶುದ್ಧೀಕರಣಗಾರಕ್ಕೆ ಅವಕಾಶವಿರಲಿಲ್ಲ. ಪಟ್ಟಣಕ್ಕೆ ಈಗ ತಲಾ ದಿನಂಪತ್ರಿ ೨೩ ಲಕ್ಷ ಲೀಟರ್ ನೀರನ್ನು ಪೂರೈಸಲಾಗುತ್ತಿದೆ.

ಬೆಳ್ತಂಗಡಿ ಪಟ್ಟಣಕ್ಕೆ ಶೋಧಿಸಿದ ನೀರನ್ನು ಹಾಗೂ ಹೆಚ್ಚಿನ ಪ್ರಮಾಣದ ನೀರನ್ನು ಪೂರೈಸುವ ಉದ್ದೇಶದಿಂದ ಸರ್ಕಾರವು ನೀರು ಸರಬರಾಜು ಅಭಿವೃದ್ಧಿ ಯೋಜನೆಯ ೨೨.೦೦ ಲಕ್ಷ ರೂ. ಗಳ ಅಂದಾಜಿಗೆ ತನ್ನ ಆದೇಶದ ಸಂಖ್ಯೆ. ಹೆಚ್ ಯು ಡಿ. ೧೫ ಯು ಡಬ್ಲ್ಯು ಎಸ್. ೮೫ ದಿನಾಂಕ ೨೮-೬-೮೫ರಲ್ಲಿ ಆನುಮೋದನೆಯನ್ನು ನೀಡಿದೆ. ಈ ಯೋಜನೆಗೆ ತಾಂತ್ರಿಕ ಮಂಜೂರಾತಿಯನ್ನು ನವೆಂಬರ್ ೧೯೮೫ರಲ್ಲಿ ನೀಡಲಾಗಿದೆ.

ಈ ಅಭಿವೃದ್ಧಿ ಯೋಜನೆಯಲ್ಲಿ ಬೆಳ್ತಂಗಡಿ ನದಿಯಲ್ಲಿ 'ಇನ್‌ಫಿಲ್ಟ್ರೇಶನ್'' ಬಾವಿಯನ್ನು ನಿರ್ಮಿಸಿ, ಅಲ್ಲಿಂದ ಇನ್‌ಟೇಕ್ ಕೊಳವೆಗಳ ಮುಖಾಂತರ ಹಾಲಿ ಇರುವ 'ಜಾಕ್‌ವೆಲ್'ನಲ್ಲಿ ನೀರನ್ನು ಪಡೆಯಲಾಗುವುದು. ೨೫ ಅಶ್ವಶಕ್ತಿಯುಳ್ಳ ಪಂಪುಗಳ ಸಹಾಯದಿಂದ ಹಾಗೂ ೨೦೦ ಮಿ. ಮಿ. ವ್ಯಾಸದ ಎರಕ ಕೊಳವೆಯ ಮುಖಾಂತರ ಪಂಪು ಮಾಡಿ ನೀರನ್ನು ರ್ಯಾಪಿಡ್ ಸಾಂಡ್ ಫಿಲ್ಟರ್ ಮೂಲಕ ಶೋಧಿಸಲಾಗುವುದು. ಶೋಧಿಸಿದ ನೀರನ್ನು ಹೊಸದಾಗಿ ನಿರ್ಮಾಣ ಮಾಡಲಾಗುವ ೫.೦೦ ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ಪಂಪು ಮಾಡಿ ನಂತರ ವಿತರಣಾ ಕೊಳವೆಗಳಿಂದ ಸರಬರಾಜು ಮಾಡಲ್ಪಡುವುದು. ಶೋಧಿಸಿದ ನೀರನ್ನು ''ಕ್ಲೋರಿನೇಶನ್'' ಮಾಡಲು ಅವಕಾಶವಿರುತ್ತದೆ. ಇದಲ್ಲದೆ ಪುಂಕೆದಕಟ್ಟೆ ಮತ್ತು ರೆಂಕೆದಗುತ್ತು ಪ್ರದೇಶಗಳಲ್ಲಿ ಎರಡು ಕೊಳವೆ ಬಾವಿ ತೋಡುವ ಅವಕಾಶವಿದೆ. ಈ ಯೋಜನೆಯನ್ನು ೨೦೧೫ನೇ ಇಸವಿಯಷ್ಟು ಹೊತ್ತಿಗೆ